# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 25/09/201

## ನಾಮಪತ್ರ ಸಲ್ಲಿಕೆಗೆ ಅನರ್ಹರಿಗಿಲ್ಲ ಅಡ್ಡಿ

**ಬೆಂಗಳೂರು:** ಹದಿನೈದು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗಳಲ್ಲಿ ಅನರ್ಹ ಶಾಸಕರೂ ನಾಮಪತ್ರ ಸಲ್ಲಿಸಬಹುದು. ಆದರೆ, ಅದು ಅಂಗೀಕಾರಗೊಳ್ಳುವುದು ಅಥವಾ ಬಿಡುವುದು ಸುಪ್ರೀಂಕೋರ್ಟ್‌ನ ತೀರ್ಪಿನ ಮೇಲೆ ಅವಲಂಬಿತವಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಸಂಜೀವ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ. 'ಸ್ಪೀಕರ್ ತೀರ್ಪಿನ ಅನುಸಾರ ಅನರ್ಹ ಶಾಸಕರು ಉಪಚುನಾವಣೆಗೆ ಸ್ಪರ್ಧಿಸಲು ಅವಕಾಶ ಇಲ್ಲ ಎಂದು ನಾವೆಲ್ಲೂ ಹೇಳಿಲ್ಲ. ನನ್ನ ಹೇಳಿಕೆಯನ್ನು ಕೆಲವರು ಬೇರೆ ರೀತಿ ಅರ್ಥೈಸಿಕೊಂಡಿದ್ದಾರೆ. ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿರುವ ಕಾರಣ ಆ ಬಗ್ಗೆ ಮಾತನಾಡಿದರೆ ನ್ಯಾಯಾಂಗ ನಿಂದನೆಯಾಗುತ್ತದೆ. ಅನರ್ಹರ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಚರ್ಚೆ ಮಾಡುವುದಿಲ್ಲ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಸ್ಪಷ್ಟನೆ ನೀಡಿದರು. ಅನರ್ಹ ಶಾಸಕರು ನಾಮಪತ್ರ ಸಲ್ಲಿಸಲು ಅವಕಾಶವಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ನಾಮಪತ್ರ ಸಲ್ಲಿಸುವವರನ್ನು ಯಾರಿಗೂ ತಡೆಯಲು ಅವಕಾಶ ಇಲ್ಲ. ಯಾರು ಬೇಕಾದರೂ ನಾಮಪತ್ರ ಸಲ್ಲಿಸಬಹುದು.

ಪುಟ 2

## ಅನರ್ಹ ಶಾಸಕರಿಗಿಲ್ಲ ಅಡ್ಡಿ

**ಮೊದಲನೇ ಪುಟದಿಂದ...** ವಿ.ವಾ. 25-9-19

ಅದು ಅಂಗೀಕಾರಗೊಳ್ಳಬೇಕೋ, ಬೇಡವೋ ಎಂಬುದನ್ನು ಚುನಾವಣಾಧಿಕಾರಿಗಳು ನಾಮಪತ್ರ ಪರಿಶೀಲನೆ ವೇಳೆ ನಿರ್ಧಾರ ಮಾಡುತ್ತಾರೆ. ಸದ್ಯಕ್ಕೆ ಪ್ರಕರಣ ವಿಚಾರಣೆ ಹಂತದಲ್ಲಿದೆ. ತೀರ್ಪು ಹೊರಬಿದ್ದ ಬಳಿಕ ಸ್ಪಷ್ಟತೆ ಸಿಗುತ್ತದೆ. ಆದುವರೆಗೂ ಈ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ ಎಂದು ಸಂಜೀವ್‌ಕುಮಾರ್ ಹೇಳಿದರು.

**ದೋಷಗಳ ಪಟ್ಟಿ:** 17 ಶಾಸಕರ ಅನರ್ಹತೆ ಸಂದರ್ಭದಲ್ಲಿ ಸ್ಪೀಕರ್ ಕಚೇರಿಯಲ್ಲಿ ನಡೆದಿರುವ ಪ್ರಕ್ರಿಯಾ ಲೋಪಗಳನ್ನು ಪಟ್ಟಿ ಮಾಡಲಾಗಿದ್ದು, ವಿಚಾರಣೆ ವೇಳೆ ಪ್ರಸ್ತಾಪವಾಗುವ ಸಾಧ್ಯತೆ ಇದೆ. ವಿಧಾನಸಭೆ ಸಚಿವಾಲಯದ ಅಧಿಕಾರಿಗಳಿಬ್ಬರು ದೆಹಲಿಯಲ್ಲಿದ್ದು, ವಕೀಲರೊಂದಿಗೆ ಚರ್ಚೆ ನಡೆಸಿದ್ದಾರೆನ್ನಲಾಗಿದೆ. ಅನರ್ಹತೆ ಮಾಡಿದ್ದು ಸರಿ ಇದೆ ಎಂದು ಸಮರ್ಥಿಸಿಕೊಂಡರೂ ಪ್ರಕ್ರಿಯೆ ವೇಳೆ ದೋಷಗಳಾಗಿವೆ ಎಂದು ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ. ಈ ಅಂಶಗಳ ಆಧಾರದಲ್ಲಿ ಪ್ರಕರಣದ ದಿಕ್ಕು ಬದಲಿಸುವ ಪ್ರಯತ್ನಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ.

**» ತೀರ್ಪು ಬಂದ ಬಳಿಕ ಸಿಗಲಿದೆ ಸ್ಪಷ್ಟತೆ**

ಎಲ್ಲ ಶಾಸಕರ ಅನರ್ಹತೆ ಒಂದೇ ತಕ್ಕಡಿಯಲ್ಲಿಟ್ಟು ತೂಗಲು ಸಾಧ್ಯವಿಲ್ಲ. ಕೆಲವರು ನಿಯಮದ ಪ್ರಕಾರವೇ ರಾಜೀನಾಮೆ ನೀಡಿದ್ದಾರೆ. ಶಂಕರ್ ಪ್ರಕರಣದಲ್ಲಿ ಮತ್ತೆ ದಾಖಲೆ ಸಲ್ಲಿಕೆಗೆ ಸ್ಪೀಕರ್ ಕಚೇರಿ ಸೂಚನೆ ನೀಡಿದ್ದು, ದಾಖಲೆ ಸಲ್ಲಿಕೆ ಆಗುವ ಮುನ್ನವೇ ಅನರ್ಹತೆ ತೀರ್ಮಾನ ಮಾಡಲಾಗಿದೆ. ಇದೆಲ್ಲ ಅಂಶಗಳು ಪರಿಗಣನೆಯಾಗಲಿದೆ ಎಂದು ತಿಳಿದುಬಂದಿದೆ.

### ಆಕ್ಷೇಪಣೆ ಸಲ್ಲಿಕೆ ಇಂದು

**17** ಅನರ್ಹ ಶಾಸಕರ ಪ್ರಕರಣದ ವಿಚಾರಣೆ ಬುಧವಾರ ಮುಂದುವರಿಯಲಿದ್ದು, ನ್ಯಾಯಪೀಠದಿಂದ 'ಮಧ್ಯಂತರ ಅಭಿಪ್ರಾಯ'ಕ್ಕೆ ಅನರ್ಹ ಶಾಸಕರು ಎದುರು ನೋಡುತ್ತಿದ್ದಾರೆ. ಅನರ್ಹ ಶಾಸಕರ ಪರ ವಕೀಲ ಮುಕುಲ್ ರೋಹಟಗಿ ವಾದ ಮುಂದುವರಿಸಲಿದ್ದು, ಅನರ್ಹತೆ ಸರಿಯಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಲಿದ್ದಾರೆ. ಜತೆಗೆ ಸೋಮವಾರ ನ್ಯಾಯಪೀಠ ಸೂಚಿಸಿದಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಅವರಿಂದ ಆಕ್ಷೇಪಣೆಗಳು ಸಲ್ಲಿಕೆಯಾಗಲಿವೆ. ಚುನಾವಣೆ ಆಯೋಗ ಹಾಗೂ ಸ್ಪೀಕರ್ ಪ್ರತಿನಿಧಿ ವಕೀಲರು ಹಾಜರಿದ್ದು, ತಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡುವ ಸಾಧ್ಯತೆ ಇದೆ. ವಕೀಲ ಕಪಿಲ್ ಸಿಬಲ್ ಗುರುವಾರ ತಮ್ಮ ವಾದ ಮಂಡಿಸಲಿದ್ದಾರೆ. ಸೋಮವಾರ ವಿಚಾರಣೆ ವೇಳೆ ಚುನಾವಣೆ ಆಯೋಗದ ಪರವಾಗಿ ಹಾಜರಿದ್ದ ವಕೀಲರ ಅಭಿಪ್ರಾಯ ಇಡೀ ಪ್ರಕರಣಕ್ಕೆ ಮಹತ್ವದ ತಿರುವು ಕೊಡುವ ಸುಳಿವು ನೀಡಿದೆ. ಈ ಕಾರಣಕ್ಕೆ ಕೋರ್ಟ್ ಕಡೆಯಿಂದ ಬುಧವಾರ ಯಾವ ರೀತಿ ಅಭಿಪ್ರಾಯ ಬರಬಹುದೆಂದು ಅನರ್ಹ ಶಾಸಕರು ಎದುರು ನೋಡುತ್ತಿದ್ದಾರೆ.